# ನಿಜವಾದ ಭಕ್ತ



✷ ಸರ್ವದಾ ಭಗವಂತನಲ್ಲೇ ಮನಸ್ಸನ್ನಿಡಬಲ್ಲ ನಿಜವಾದ ತ್ಯಾಗಿಗಳನ್ನು ಜೇನುಹುಳುಗಳಿಗೆ ಹೋಲಿಸಬಹುದು. ಅವು ಕೇವಲ ಹೂವುಗಳ ಮೇಲೆ ಇಳಿದು ಮಧುಪಾನ ಮಾಡುತ್ತವೆ. ಯಾರು ಈ ಜಗತ್ತಿನಲ್ಲಿ ಕಾಮಕಾಂಚನಗಳ ಮಧ್ಯೆ ಇರುತ್ತಾರೋ, ಅವರ ತಮ್ಮ ಮನಸ್ಸನ್ನು ಭಗವಂತನ ಕಡೆಗೆ ತಿರುಗಿಸಬಲ್ಲರು. ಆದರೆ ಕೆಲವು ವೇಳೆ ಅವರು ಕಾಮಕಾಂಚನಗಳ ಕಡೆಗೂ ಅದನ್ನು ತಿರುಗಿಸಿಬಿಡುತ್ತಾರೆ. ಅವರು ಈ ಸಾಧಾರಣ ನೊಣಗಳ ಹಾಗೆ. ಅವು ಸಿಹಿ ತಿಂಡಿಗಳ ಮೇಲೂ ಕೂರುತ್ತವೆ, ಕೊಳೆತು ನಾರುವ ಹಣ್ಣುಗಳ ಮೇಲೂ ಕೂರುತ್ತವೆ, ಹೇಸಿಗೆ ಮೇಲೂ ಕೂರುತ್ತವೆ.

✷ ಕಾಮಕಾಂಚನಗಳ ಮಧ್ಯೆ ಬಹಳ ಕಾಲ ಇದ್ದುದ್ದೇ ಆದರೆ, ಅವು ಮನಸ್ಸನ್ನು ಚೆಲ್ಲಾಪಿಲ್ಲಿ ಮಾಡಿಬಿಡುತ್ತವೆ. ಆದ್ದರಿಂದ ಬಹಳ ಎಚ್ಚರಿಕೆಯಿಂದ ಇರಬೇಕು. ಆದರೆ ಸಂನ್ಯಾಸಿಗಳು ಅಷ್ಟೊಂದು ಹೆದರಿಕೊಳ್ಳಬೇಕಾದ್ದೇನಿಲ್ಲ. ನಿಜವಾದ ತ್ಯಾಗಿಗಳು ಕಾಮಕಾಂಚನಗಳಿಂದ ಬಹಳ ದೂರದಲ್ಲೇ ಇರುತ್ತಾರೆ. ಆದ್ದರಿಂದ ಸಾಧನೆಯ ಮೂಲಕ ಆತ ಸರ್ವದಾ ಭಗವಂತನಲ್ಲಿ ತನ್ನ ಮನಸ್ಸನ್ನು ಇಡಬಲ್ಲ.

✷ ನಿಜವಾಗಿ ಭಕ್ತನಿಗೆ ಕೆಲವು ಲಕ್ಷಣಗಳಿವೆ. ಗಾರುಡಿಗನ ಹಾಡು ಕೇಳಿ ವಿಷಸರ್ಪ ಸ್ತಬ್ಧವಾಗಿಬಿಡುವ ಹಾಗೆ ಭಕ್ತ ಗುರುವಿನ ಉಪದೇಶ ಕೇಳಿ ಸ್ತಬ್ಧನಾಗಿಬಿಡುತ್ತಾನೆ. ಆದರೆ ಕಟ್ಟಿನ ಹಾವು ಹಾಗೆ ಮಾಡದು. ಇನ್ನೊಂದು ಲಕ್ಷಣ, ಆತನಿಗೆ ಚೆನ್ನಾದ ಗ್ರಹಣ ಶಕ್ತಿ ಇರುತ್ತದೆ. ಬರೀ ಗಾಜಿನ ಮೇಲೆ ವಸ್ತುವಿನ ಪ್ರತಿಬಿಂಬ ಮೂಡದು. ಆದರೆ ಬೆಳ್ಳಿಯ ಉಪ್ಪು ಸವರಿದ ಗಾಜಿನ ಮೇಲೆ ಅದು ಮೂಡುತ್ತದೆ. ಉದಾಹರಣೆಗೆ ಫೋಟೋಗ್ರಫಿ. ಭಕ್ತಿಯೇ ಬೆಳ್ಳಿಯ ಉಪ್ಪು. ಮತ್ತೊಂದು ಲಕ್ಷಣ, ಜಿತೇಂದ್ರಿಯನಾಗಿರುತ್ತಾನೆ. ಕಾಮಜಯಿಯಾಗಿರುತ್ತಾನೆ. ಗೋಪಿಯರಿಗೆ ಕಾಮವೆಂಬುದೇ ಇರಲಿಲ್ಲ.

✷ ಉತ್ತಮ ಭಕ್ತ ಯಾರು ಗೊತ್ತೆ? ಯಾರು ಬ್ರಹ್ಮಜ್ಞಾನವನ್ನು ಪಡೆದುಕೊಂಡ ನಂತರ ಭಗವಂತನೇ ಈ ಜೀವ, ಜಗತ್ತು, ಚತುರ್ವಿಂಶತಿ ತತ್ತ್ವ ಆಗಿದ್ದಾನೆ ಎಂಬುದಾಗಿ ನೋಡುತ್ತಾನೋ ಆತ. ಮೊದಲು ನೇತಿ, ನೇತಿ, ಇದಲ್ಲ, ಇದಲ್ಲ ಎಂದು ವಿಚಾರ ಮಾಡಿ ಚಾವಣಿಯನ್ನು ಮುಟ್ಟಬೇಕು. ಆಗ ಆತನಿಗೆ ಗೊತ್ತಾಗುತ್ತದೆ, ಚಾವಣಿ ಯಾವುದರಿಂದ ತಯಾರಾಗಿದೆಯೋ, ಇಟ್ಟಿಗೆ, ಸುಣ್ಣ, ಇಟ್ಟಿಗೆಪುಡಿ ಮೊದಲಾದ ಅದೇ ವಸ್ತುಗಳಿಂದಲೇ ಮೆಟ್ಟಿಲ ಸಾಲೂ ತಯಾರಾಗಿದೆ ಎಂಬುದಾಗಿ. ಆಗ ಆತನಿಗೆ ತೋರಿ ಬರುತ್ತದೆ, ಬ್ರಹ್ಮವೇ ಜೀವ ಜಗತ್ತು, ಸಮಸ್ತವೂ ಆಗಿದ್ದಾನೆ ಎಂಬುದಾಗಿ.

✷ ಸಂಸಾರದಲ್ಲಿದ್ದರೂ ಯಾರು ಭಗವಂತನನ್ನು ಪ್ರಾರ್ಥಿಸುತ್ತಾನೋ ಆತ ವೀರಭಕ್ತ. ಭಗವಂತ ಭಾವಿಸುತ್ತಾನೆ: ಯಾರು ಸಂಸಾರವನ್ನು ತ್ಯಜಿಸಿದ್ದಾನೋ ಆತ ನನ್ನನ್ನು ಪ್ರಾರ್ಥಿಸಿಯೇ ಪ್ರಾರ್ಥಿಸುತ್ತಾನೆ. ನನ್ನ ಸೇವೆಯನ್ನು ಆತ ಮಾಡಲೇಬೇಕು. ಇದರಲ್ಲಿ ವಿಶೇಷತೆಯೇನಿದೆ? ಒಂದು ಪಕ್ಷ ಆತ ನನ್ನನ್ನು ಪ್ರಾರ್ಥಿಸದಿದ್ದರೆ ಎಲ್ಲರೂ ಆತನಿಗೆ ಛೀಮಾರಿ ಮಾಡಿಬಿಡುತ್ತಾರೆ. ಆದರೆ ಯಾರು ಸಂಸಾರದಲ್ಲಿದ್ದೂ ನನ್ನನ್ನು ಪ್ರಾರ್ಥಿಸುತ್ತಾನೋ ಸಂಸಾರವೆಂಬ ಇಪ್ಪತ್ತು ಮಣದ ಕಲ್ಲನ್ನು ಒಂದು ಕಡೆಗೆ ತಳ್ಳಿ ನನ್ನ ದರ್ಶನ ಪಡೆಯಲು ಪ್ರಯತ್ನಿಸುತ್ತಾನೋ, ಆತನೇ ಧನ್ಯ, ಆತನೇ ಮಹಾತ್ಮ, ಆತನೇ ವೀರಪುರುಷ.

✷ ಸಂಸಾರಿ ವ್ಯಕ್ತಿಯ ಜ್ಞಾನ, ಭಕ್ತರ ಜ್ಞಾನ, ಅವತಾರ ಪುರುಷರ ಜ್ಞಾನ ಒಂದೇ ಸಮವಾದುದಲ್ಲ. ಸಂಸಾರಿ ವ್ಯಕ್ತಿಯ ಜ್ಞಾನ ಒಂದು ಹಣತೆಯ ಬೆಳಕು ಇದ್ದ ಹಾಗೆ ಮನೆಯ ಒಳಪ್ರದೇಶ ಮಾತ್ರ ಬೆಳಕಾಗುತ್ತದೆ. ಆ ಬೆಳಕಿನಿಂದ ಊಟ, ಮನೆಗೆಲಸ, ಶರೀರ ರಕ್ಷಣೆ ಇತ್ಯಾದಿ ಸಾಧ್ಯ.

✷ ಭಕ್ತರ ಬೆಳಕು ಚಂದ್ರನ ಬೆಳಕು ಇದ್ದ ಹಾಗೆ. ಅದು ಮನೆಯ ಒಳಗೆ ಹೊರಗೆ ಇರುವುದನ್ನೆಲ್ಲ ಪ್ರಕಾಶಗೊಳಿಸುತ್ತದೆ. ಆದರೆ ಬಹಳ ದೂರದಲ್ಲಿರುವ ವಸ್ತುಗಳನ್ನು ಅಥವಾ ಬಹಳ ಪುಟ್ಟ ವಸ್ತುಗಳನ್ನು ಆ ಬೆಳಕಿನಿಂದ ನೋಡಲಾಗುವುದಿಲ್ಲ.

✷ ಅವತಾರಾದಿಗಳ ಬೆಳಕು ಸೂರ್ಯನ ಬೆಳಕು ಇದ್ದ ಹಾಗೆ. ಒಳಗೆ ಹೊರಗೆ ದೊಡ್ಡದು, ಚಿಕ್ಕದು ಎಲ್ಲವನ್ನೂ ಅವರು ಚೆನ್ನಾಗಿ ನೋಡಬಲ್ಲರು.

✷ ನಿಜವಾದ ತ್ಯಾಗೀಭಕ್ತ ಚಾತಕಪಕ್ಷಿ ಇದ್ದ ಹಾಗೆ. ಅದು ಸ್ವಾತಿ ಮಳೆಯ ನೀರನ್ನು ವಿನಾ ಬೇರೆ ಯಾವ ನೀರನ್ನೂ ಕುಡಿಯದು. ಏಳು ಸಮುದ್ರಗಳಲ್ಲೂ, ಎಲ್ಲಾ ನದಿಗಳಲ್ಲೂ ನೀರು ತುಂಬಿ ತುಳುಕಾಡುತ್ತಿದ್ದರೂ ಅವೊಂದನ್ನೂ ಅದು ಮುಟ್ಟದು. ತ್ಯಾಗೀ ಭಕ್ತ ಕಾಮಕಾಂಚನಗಳನ್ನು ಇಕ್ಕಳದಿಂದಲೂ ಮುಟ್ಟುವುದಿಲ್ಲ. ಕಾಮ ಕಾಂಚನಗಳನ್ನು ಹತ್ತಿರ ಇಟ್ಟುಕೊಳ್ಳುವುದಿಲ್ಲ, ಆಸಕ್ತಿ ಉಂಟಾಗಿಬಿಡಬಹುದೆಂದು.

✷ ಭಗವಂತನಲ್ಲಿ ಸರ್ವದಾ ಮನಸ್ಸನ್ನಿಡುವ ಮೊದಲು ಸ್ವಲ್ಪ ಶ್ರಮಿಸಬೇಕಾಗುತ್ತದೆ; ಕೊನೆಗೆ ವಿಶ್ರಾಂತಿವೇತನ ದೊರೆಯುತ್ತದೆ.

'ಶ್ರೀರಾಮಕೃಷ್ಣ ವಚನವೇದ' ದಿಂದ ✷

# ಆಧ್ಯಾತ್ಮಿಕ ಸಂಭಾಷಣೆ

## ಸ್ವಾಮಿ ಭೂತೇಶಾನಂದಜೀಯವರೊಂದಿಗೆ

ಕನ್ನಡ ಅವತರಣಿಕೆ : ಸ್ವಾಮಿ ಮಂಗಳಾತ್ಮಾನಂದ



**ಪ್ರಶ್ನೆ:** ಮಹಾರಾಜ್, ಹರಿ ಮಹಾರಾಜರು (ಸ್ವಾಮಿ ತುರೀಯಾನಂದರು) ಮಹಾಸಮಾಧಿಗೆ ಮುನ್ನ ಹೇಳುತ್ತಿದ್ದರು, ''ಬ್ರಹ್ಮ ಸತ್ಯ, ಜಗತ್ ಸತ್ಯ'' ಅಂತ. ಹಾಗಾದರೆ ಜಗತ್ತು ಯಾವ ರೂಪದಲ್ಲಿ ಸತ್ಯ?

**ಮಹಾರಾಜ್:** ರೂಪದಲ್ಲಿ – ಜಗತ್ತು ಸತ್ಯವಲ್ಲ.

**ಪ್ರಶ್ನೆ:** ಬ್ರಹ್ಮರೂಪದಲ್ಲಿ ಜಗತ್ತು ಸತ್ಯ, ಹಾಗಾದರೆ ಬ್ರಹ್ಮವೇ ಜಗತ್ತಾಗಿದೆಯೆ?

**ಮಹಾರಾಜ್:** ಅದೇ, ಅಸಲಿ (ನಿಜವಾದ) ವಿಚಾರ.

**ಪ್ರಶ್ನೆ:** ಹಾಗಾದರೆ ಜಗತ್ತು ಇಲ್ಲ ಎಂದರೂ ಹಾಗೆ ತಾನೆ?

**ಮಹಾರಾಜ್:** ಬ್ರಹ್ಮವನ್ನು ಬಿಟ್ಟು ಜಗತ್ತಿಲ್ಲ – ಇದು ಸತ್ಯ. ಜಗತ್ತು ಇಲ್ಲವೆಂದು ಹೇಳಿದರೆ ವಾಸ್ತವಾಂಶವನ್ನು ಸರಿಯಾಗಿ ಅರ್ಥಮಾಡಿಕೊಂಡು ಹೇಳಿದ ಹಾಗೆ ಆಗಲಿಲ್ಲ. ಜಗತ್ತು ಜಗತ್ತಿನ ರೂಪದಲ್ಲಿ ಅಲ್ಲ – ಬ್ರಹ್ಮರೂಪದಲ್ಲಿದೆ.

**ಪ್ರಶ್ನೆ:** ಬ್ರಹ್ಮ ಬಂದು ಹೋದರೂ, ಹೇಳಲು ಏನೂ ಇರುವುದಿಲ್ಲ. ಬ್ರಹ್ಮವನ್ನು ತಲುಪಿದರೆ ಏನನ್ನೂ ಹೇಳಲಾಗದು, ಮಾತು ಸ್ತಬ್ಧವಾಗುತ್ತದೆ.

**ಮಹಾರಾಜ್:** ಬ್ರಹ್ಮ ಎಂಬ ಶಬ್ದವನ್ನು ಉಚ್ಚರಿಸಲಾಗುತ್ತದಲ್ಲವೆ?

**ಪ್ರಶ್ನೆ:** ಅದು ಹೇಗೆ ಆಗುತ್ತದೆ?

**ಮಹಾರಾಜ್:** ಆದರೆ ಅದು ಬ್ರಹ್ಮ ಸ್ವರೂಪವಾಗಲಿಲ್ಲ.

**ಪ್ರಶ್ನೆ:** ಎಲ್ಲಿ ತನಕ ಶಬ್ದ(ಬ್ರಹ್ಮ)ವು ದ್ವಂದ್ವದಲ್ಲಿರುತ್ತದೋ ಅದು ಬ್ರಹ್ಮಸತ್ತಾ ಆಗುವುದಿಲ್ಲ.

**ಮಹಾರಾಜ್:** ಬ್ರಹ್ಮವೆಂದರೇನೆಂದು ಪರಮಹಂಸರು ಹೇಳುತ್ತಿದ್ದರು, ಅದನ್ನು ಮಾತಿನ ಮೂಲಕ ಹೇಳಲಾಗದು ಅಂತ (‘ವಾಗತೀತ’). ಹಾಗಾಗಿ ನಾವು ಬ್ರಹ್ಮವೆಂದರೆ ಏನೆಂದು ಹೇಳುತ್ತೇವೆಯೋ ಆ ಬ್ರಹ್ಮನ ಅರಿವು ಶಬ್ದಗಳ ಮೂಲಕ ಆಗುತ್ತಿಲ್ಲ.

**ಪ್ರಶ್ನೆ:** ಬ್ರಹ್ಮಾನುಭವ ನಾವು ಮಾಡಿಕೊಳ್ಳಬೇಕಾದರೂ, ನಮಗೆ ಶಾಸ್ತ್ರ, ಅರ್ಥಾತ್ ಶಬ್ದರಾಶಿ, ಅದೇ ತಾನೆ ನಮಗೆ ಅವಲಂಬನೆ?

**ಮಹಾರಾಜ್:** ಶಬ್ದ(ಶಾಸ್ತ್ರ)ವನ್ನೇ ಅವಲಂಬನೆ ಮಾಡಿದರೆ ಬ್ರಹ್ಮಾನುಭವ ಸಾಧ್ಯವೇ ಇಲ್ಲ.

**ಪ್ರಶ್ನೆ:** ಹಾಗಾದರೆ, ಬ್ರಹ್ಮಾನುಭವವನ್ನು ಪಡೆಯಲು ನಮಗೆ ಉಪಾಯವೇನು?

**ಮಹಾರಾಜ್:** ‘**ಅಶಬ್ದಮ್**’– ಶಾಸ್ತ್ರ ಹೇಳುತ್ತದೆ, ಅದು **ಅಶಬ್ದಮ್** (ಶಬ್ದರಹಿತ) ಎಂದು.

> **‘ಅಶಬ್ದಮಸ್ಪರ್ಶಮರೂಪಮವ್ಯಯಂ**
> **ತಥಾರಸಂ ನಿತ್ಯಮಗಂಧವಚ್ಚ ಯತ್।**
> **ಅನಾದ್ಯನಂತಂ ಮಹತಃ ಪರಂ ಧ್ರುವಂ**
> **ನಿಚಾಯ್ಯ ತನ್ಮೃತ್ಯುಮುಖಾತ್ ಪ್ರಮುಚ್ಯತೇ ॥’**
>
> ***(ಕಠೋಪನಿಷತ್ತು, ೧.೩.೧೫)***

**ಪ್ರಶ್ನೆ:** ಅದು ಶಬ್ದರಹಿತವಾದರೂ, ನಾವು ಅದಕ್ಕೆ ಶಬ್ದ ನೀಡಿ (ಶಾಸ್ತ್ರಗಳಿಂದ) ಅರ್ಥಮಾಡಿಕೊಳ್ಳಬೇಕು.

**ಮಹಾರಾಜ್:** ಕೇಳಯ್ಯ! ಅದನ್ನು ಬಿಟ್ಟು ನೀವೆಲ್ಲ ಇದ್ದೀರಾ?

**ಪ್ರಶ್ನೆ:** ಅದೇ ಪ್ರತ್ಯಕ್ಷ ಅನುಭವ ಆಗುವುದು. ಪ್ರಾರಂಭದಲ್ಲಿ ಹೇಳಿದಿರಿ ತಾನೆ – ಪ್ರತ್ಯಕ್ಷವನ್ನು ಸ್ವೀಕರಿಸಬೇಕಾಗುತ್ತದೆ ಎಂದು.

**ಮಹಾರಾಜ್:** ಪ್ರತ್ಯಕ್ಷವೆಂದರೆ ಕಣ್ಣಲ್ಲಿ ನೋಡುವುದೆ ?

**ಪ್ರಶ್ನೆ:** ಕಣ್ಣಲ್ಲಿ ನೋಡುವುದು, ಹಾಗೆಂದು ಕೂಡ ಹೇಳಬಹುದು.

**ಮಹಾರಾಜ್:** ಅದನ್ನು ಕಣ್ಣಲ್ಲಿ ನೋಡಲಾಗುವುದಿಲ್ಲ.

**ಪ್ರಶ್ನೆ:** ನಮ್ಮ ಸ್ವಂತ ಅನುಭವದಿಂದ ನಾವು ಇದ್ದೇವೆಂದು ಹೇಳುತ್ತೇವೆ.

**ಮಹಾರಾಜ್:** ವಿಷಯವೇನೆಂದರೆ, ಬ್ರಹ್ಮನ ಸ್ವರೂಪ ಹೀಗೆಂದು ಮಾತಿನಲ್ಲಿ ಹೇಳಲಾಗದು. ಇದೇ ಸಾರ, ಇದೇ ಸರಿಯಾದ ಉತ್ತರ.

**ಪ್ರಶ್ನೆ:** ಬ್ರಹ್ಮವೆಂದರೆ ಶಬ್ದ ಬ್ರಹ್ಮವಲ್ಲ. ಅದನ್ನು ಮಾತಿನಲ್ಲಿ ಹೇಳಲು ಆಗುವುದಿಲ್ಲ. ಹಾಗಾದರೆ ಈ ಹೇಳುವವನು ಯಾರು?

**ಮಹಾರಾಜ್:** ಅದು ಅಜ್ಞಾನ, ಅದೇ ಹೇಳುತ್ತದೆ.

**ಪ್ರಶ್ನೆ:** ಹಾಗಾದರೆ ಅಜ್ಞಾನ ಇದೆಯೇ?

**ಮಹಾರಾಜ್:** ಹೌದು.

**ಪ್ರಶ್ನೆ:** ಹಾಗಾದರೆ ಅಜ್ಞಾನವನ್ನು ಇದೆಯೆಂದು ಸ್ವೀಕರಿಸಬೇಕು.

**ಮಹಾರಾಜ್:** ಕೆಲಸ ಕಾರ್ಯಗಳ ಮೂಲಕವೇ ನಾವು ಅಜ್ಞಾನವನ್ನು ನೋಡುವುದು. ಅದಕ್ಕೆ ಕೈಕಾಲುಗಳಿವೆಯೆ? ಅಜ್ಞಾನಕ್ಕೆ ಕೈಕಾಲುಗಳಿಲ್ಲ, ಅದರ ಕ್ರಿಯೆಯ ಮೂಲಕವೇ ಅದನ್ನು ಅರಿಯುತ್ತೇವೆ.

**ಪ್ರಶ್ನೆ:** ಅದೇ ತಾನೆ, ಅಜ್ಞಾನದ ಕಾರ್ಯವೇನಿದೆಯೋ, ಅದನ್ನು ನಾವು ನಮ್ಮ ಕಣ್ಣುಗಳಿಂದ ನೋಡುತ್ತಿದ್ದೇವೆ. ಅದರ ಅವಲಂಬನೆ

ಯಿಂದಲೇ ನಾವು ಅಜ್ಞಾನವನ್ನು ಅರ್ಥಮಾಡಿಕೊಳ್ಳುತ್ತೇವೆ.

**ಮಹಾರಾಜ್:** ಅದರಿಂದ ಬ್ರಹ್ಮಾನುಭವ ಸಾಧ್ಯವೆ?

**ಪ್ರಶ್ನೆ:** ಅದು ಬಿಟ್ಟು ಬೇರೆ ಉಪಾಯ?

**ಮಹಾರಾಜ್:** ಬ್ರಹ್ಮವನ್ನು ಹಿಡಿಯಲು ಉಪಾಯವಿಲ್ಲ, ಒಂದು ವೇಳೆ ನೀನೇ ಬ್ರಹ್ಮನಾದರೆ ಬ್ರಹ್ಮವನ್ನು ಹೇಗೆ ಹಿಡಿಯಬಲ್ಲೆ?

**ಪ್ರಶ್ನೆ:** ಒಂದು ವೇಳೆ ಬೇರೆ ಉಪಾಯವಿಲ್ಲ, ಹಾಗಾದರೆ ಅದನ್ನು ಹೇಳುವಂತದ್ದು ಯಾವುದು?

**ಮಹಾರಾಜ್:** ಯಾವುದು ಮಾತಾಡುತ್ತಿದೆಯೋ ಅದೇ ಅಜ್ಞಾನ.

**ಪ್ರಶ್ನೆ:** ಅರ್ಥವಾಗಲಿಲ್ಲ ಮಹಾರಾಜ್.

**ಮಹಾರಾಜ್:** ಆಗಲಿಲ್ಲವಲ್ಲ, ಬ್ರಹ್ಮನನ್ನು ಹಿಡಿಯುವರು ಯಾರು? ಬ್ರಹ್ಮವನ್ನು ಬಿಟ್ಟು ಬೇರೆ ಏನೂ ಇಲ್ಲವೆಂದರೂ, ಆಗಲೂ ಬ್ರಹ್ಮನನ್ನು ಹಿಡಿಯುವರಾರು? ಒಂದು ವೇಳೆ ಬ್ರಹ್ಮನನ್ನು ಬ್ರಹ್ಮವೇ ಹಿಡಿಯುತ್ತದೆಂದು ಹೇಳುವೆಯಾದರೆ ಅದು ದೋಷ. ಇಲ್ಲಿ ಬ್ರಹ್ಮವನ್ನು ಹಿಡಿಯುವರು ಯಾರೂ ಇಲ್ಲ, ಹಾಗೆ ಹೇಳಿದರೂ ದೋಷ.

**ಪ್ರಶ್ನೆ:** ಹಾಗಾದರೆ, ಬ್ರಹ್ಮ ಇದೆ, ಬ್ರಹ್ಮನ ಬಗ್ಗೆ ನಡೆಯುವ ಸಂಭಾಷಣೆ, ಇವುಗಳೆಲ್ಲವೂ ಮಿಥ್ಯೆ ಆಗುತ್ತದೆಯಲ್ಲವೆ?

**ಮಹಾರಾಜ್:** ಹೌದು, ಮಿಥ್ಯೆಯೇ. ಅಜ್ಞಾನದ ನಿವೃತ್ತಿಗಾಗಿ ಎಲ್ಲ ವಿಚಾರಗಳು. '**ತತ್ರ ವೇದಾಃ ಅವೇದಾಃ ಭವಂತಿ**' ವೇದಗಳೂ ಅಲ್ಲಿ ಅವೇದವಾಗುತ್ತವೆ.

**ಪ್ರಶ್ನೆ:** **ಅಶಬ್ದಮ್, ಅಸ್ಪರ್ಶಮ್** - ಹೇಳಲಾಗುತ್ತದೆ; ಶಾಸ್ತ್ರವು ಶಬ್ದರೂಪವನ್ನು ನೀಡಿ ಹೇಳುತ್ತಿದೆ. ಶಾಸ್ತ್ರವು ಯಾವುದನ್ನು ಹೇಳಲು ಅಪೇಕ್ಷಿಸುತ್ತದೋ ಅದನ್ನಿಲ್ಲಿ ಶಬ್ದರೂಪ ನೀಡಿ ಹೇಳಿದೆ.

**ಮಹಾರಾಜ್:** ಶಬ್ದರೂಪ ನೀಡಿ ಹೇಳಲಾಗುತ್ತಿದೆ ತಾನೆ? ಅದು ಶಬ್ದವಲ್ಲ. ಶಬ್ದವನ್ನು ಪ್ರತಿಷ್ಠೆ ಮಾಡಲು ಆಗುತ್ತದೆಯೇ?

**ಪ್ರಶ್ನೆ:** ಅರ್ಥ ಮಾಡಿಕೊಳ್ಳಲು ಹೇಳುತ್ತಿದ್ದೇವೆ. ಸ್ವರೂಪ ಏನೆಂದು ಅರಿಯದಿದ್ದರೂ ಅದರ ಬಗ್ಗೆ ಮಾತನಾಡುತ್ತೇವೆ.

**ಮಹಾರಾಜ್:** ಶಬ್ದವಿಲ್ಲವೆಂದಾದ ಮೇಲೆ ಶಬ್ದದ ಪ್ರತಿಷ್ಠೆ ಯಾಯಿತೆ?

**ಪ್ರಶ್ನೆ:** ಶಬ್ದವಿಲ್ಲ ಏಕೆ? ಬ್ರಹ್ಮ ಶಬ್ದವೇ ವ್ಯವಹಾರದಲ್ಲಿದೆ.

**ಮಹಾರಾಜ್:** ಶಬ್ದದ ಮೂಲಕ ಬ್ರಹ್ಮದ ವಿವರಣೆ ಕೊಡಲು ಆಗುವುದೇ ಇಲ್ಲ. ಅಶಬ್ದವೆಂದರೆ ಅದು ಶಬ್ದಾತೀತ ಎಂದರ್ಥ. **ಬ್ರಹ್ಮ** ಎಂಬ ಶಬ್ದವನ್ನು ಕೂಡ ಅದಕ್ಕೆ ಹೇಳಲಾಗದು. ಬ್ರಹ್ಮವೆಂದರೆ ಸರ್ವವ್ಯಾಪಿ. ಸರ್ವವ್ಯಾಪಿ ಕೂಡ ಅಲ್ಲ ; ಅದು ಎಲ್ಲಿಂದ ಆರಂಭವಾಗುತ್ತದೆ?

**ಪ್ರಶ್ನೆ:** ಶಬ್ದ ಅದರದ್ದಲ್ಲ , ಸ್ಪರ್ಶ ಅದರದಲ್ಲ, ಆ ವಸ್ತು(ಬ್ರಹ್ಮ) ಇದೆ ಎನ್ನುವುದಕ್ಕೆ ಪ್ರಮಾಣ ಏನು ಮಹಾರಾಜ್?

**ಮಹಾರಾಜ್:** ಪ್ರಮಾಣದ ಆವಶ್ಯಕತೆ ಇಲ್ಲ. ಒಂದು ವಸ್ತುವಿನ ಸಂಬಂಧದ ಬಗ್ಗೆ ಸಂದೇಹ ಬಂದಾಗ ಅದಕ್ಕೊಂದು ಪ್ರಮಾಣ ಬೇಕು. ಆದರೆ ಇಲ್ಲಿ ವಸ್ತುವಿನ ಬಗ್ಗೆ ನಿಸ್ಸಂದೇಹವಿರುವಾಗ ಪ್ರಮಾಣದ ಆವಶ್ಯಕತೆ ಇಲ್ಲ.

**ಪ್ರಶ್ನೆ:** ನಿಸ್ಸಂದೇಹ ಎಂಬುದು ಹೇಗಾಯಿತು? ಯಾವ ವಸ್ತು **ಅಶಬ್ದಮ್, ಅಸ್ಪರ್ಶಮ್** ಎಂದಾಗಿರುವಾಗ ನಿಸ್ಸಂದೇಹವಾಗುವುದು ಹೇಗೆ? ನೋಡಲೂ ಸಿಗುತ್ತಿಲ್ಲ, ಅನುಭವಕ್ಕೂ ಬರುತ್ತಿಲ್ಲ.

**ಮಹಾರಾಜ್:** ನೀವೇ ಮಾಡಿ ನೋಡಿ, ನೀವೇ ಅಜ್ಞಾನ.

**ಪ್ರಶ್ನೆ:** ಸಂಗತಿ ಇಷ್ಟೆ, ನಾವು ಅಜ್ಞಾನದಲ್ಲಿರಬಹುದು. ಬ್ರಹ್ಮವೆನ್ನುವುದು ಇದೆ, ಆದರೆ ಬ್ರಹ್ಮ ವಸ್ತುವಿನ ಪ್ರಮಾಣವೇ ಇಲ್ಲದಿರುವಾಗ, ಅದರ ಬಗ್ಗೆ ವಿಚಾರ ಮಾಡಿ ಏನು ಪ್ರಯೋಜನ?

**ಮಹಾರಾಜ್:** ಅಯ್ಯಾ! ಬ್ರಹ್ಮನಿಂದಲೇ ಸಮಸ್ತ ಪ್ರಮಾಣವೂ ಪ್ರಮಾಣಿತವಾಗಿದೆ. ಬ್ರಹ್ಮವನ್ನು ಬೇರೆ ಪ್ರಮಾಣದಿಂದ ಸಾಧಿಸಲು ಸಾಧ್ಯವಿಲ್ಲ.

**ಪ್ರಶ್ನೆ:** ಹಾಗಾದರೆ ಬ್ರಹ್ಮವಸ್ತುವನ್ನು ಕುರಿತು ಚರ್ಚೆ ಮಾಡದಿದ್ದರೇನೇ ಲೇಸು.

**ಮಹಾರಾಜ್:** ಚರ್ಚೆ ಮಾಡದಿದ್ದರೆ ಅದೊಂದು ವಿವರಣೆಯಷ್ಟೆ? ಹಾಗಲ್ಲ , ಯಾರು ಬ್ರಹ್ಮನಿಲ್ಲವೆಂದು ಹೇಳುತ್ತಾನೋ ಅವನು ಯಾರು?

**ಪ್ರಶ್ನೆ:** ಅವನನ್ನು ಶಬ್ದದ ಮೂಲಕವೂ ತಿಳಿಯಬಹುದು, ಸ್ಪರ್ಶದ ಮೂಲಕವೂ ತಿಳಿಯಬಹುದು, ಅವನೇ ಮಾತಾಡುತ್ತಿದ್ದಾನೆ.

**ಮಹಾರಾಜ್:** ಒಂದು ವೇಳೆ ಅದನ್ನು (ಬ್ರಹ್ಮವನ್ನು) ಹುಡುಕಿದರೆ, ಅದರ ಸ್ವರೂಪವನ್ನು ಹಿಡಿಯಲು ಪ್ರಯತ್ನಪಟ್ಟರೆ, ಆಗ ಏನಾದರೂ ಸಿಗಬಹುದೆ?

**ಪ್ರಶ್ನೆ:** ಒಂದು ವೇಳೆ ಏನೂ ಗೊತ್ತಾಗದಿದ್ದರೆ, ಅವನಿಲ್ಲ; ಶೂನ್ಯ.

**ಮಹಾರಾಜ್:** ಶೂನ್ಯವೆಂದು ಹೇಳುವಾಗಲೂ ಶಬ್ದದಿಂದಲೇ ಹೇಳಲಾಗುತ್ತದೆ.

**ಪ್ರಶ್ನೆ:** ನಾವೂ ಅದನ್ನೇ ಹೇಳಿದ್ದು. ಶಬ್ದದ ಮೂಲಕವೇ ವಸ್ತು ಪ್ರಕಾಶಿಸುವುದು. ಶಬ್ದಾತೀತವಾದದ್ದು ಯಾವುದಿದೆ?

**ಮಹಾರಾಜ್:** ಬ್ರಹ್ಮಸ್ವರೂಪವು ಶಬ್ದಾತೀತ ಎಂಬ ವಿಚಾರವನ್ನು ಅರ್ಥಮಾಡಿಕೊಳ್ಳಬೇಕು. ಸ್ವರೂಪವನ್ನು ಮಾತಿನಿಂದ ಹೇಳಲಾಗದು, ಅದು ವಾಗತೀತ. ಇದೇ ಬ್ರಹ್ಮವನ್ನು ಅರ್ಥಮಾಡಿಕೊಳ್ಳುವ ರೀತಿ.

**ಪ್ರಶ್ನೆ:** ಇದು ಶೂನ್ಯವೆಂದು ಹೇಳಿದರೂ, ಅದನ್ನು ನಮ್ಮಿಂದ ಅರ್ಥೈಸಲಾಗದು, ಇದನ್ನು ಕೂಡ ನಾವು ತಿಳಿದುಕೊಳ್ಳಬೇಕು.